ಸೂಕ್ತ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದು, ಕೇಂದ್ರ ಸರ್ಕಾರ 10 ಸಾವಿರ ಕೋಟಿ ನಿಧಿ ಸ್ಥಾಪಿಸಿದ್ದು, ಈ ಯೋಜನೆಯ ನೆರವು ಪಡೆದು ತೀವ್ರಗತಿಯಲ್ಲಿ ಸರ್ಕಾರ ಯಾವಾಗ ಅನುಷ್ಠಾನಗೊಳಿಸುವುದು;

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು.

ಅ) 1980 ರಲ್ಲಿ ತುಂಗಾ ಮೇಲ್ದಂಡೆ ಯೋಜನೆಗೆ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಹಾಗೂ ಹೊನ್ನಾಳಿ ತಾಲ್ಲೂಕುಗಳು ಹಾಗೂ ಅಂದಿನ ಧಾರವಾಡ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ ಮತ್ತು ಹಾನಗಲ್ ತಾಲ್ಲೂಕಿನ 94,695 ಹೆಕ್ಟೇರ್ ಜಮೀನಿಗೆ ಖಾರೀಫ್ ಮತ್ತು ರಬಿ ಹಂಗಾಮಿಗೆ ನೀರೋದಗಿಸಲು ವರದಿ ತಯಾರಿಸಲಾಗಿತ್ತು. ಮಾಲತಿ ಡ್ಯಾಂ ನಿರ್ಮಾಣದಿಂದ ಸುಮಾರು 25,059 ಎಕರೆ ಜಮೀನು ಮುಳುಗಡೆ ಆಗುತ್ತಿದ್ದು, ಅದರಲ್ಲಿ 17,021 ಎಕರೆ ಅರಣ್ಯ ಜಮೀನು ಒಳಗೊಂಡಿರುವುದರಿಂದ ಹಾಗೂ ಈ ನಿರ್ಮಾಣದಿಂದ ಸುಮಾರು 25 ಗ್ರಾಮಗಳು ಪೀಡಿತವಾಗಿರುವುದರಿಂದ ಈಗಿನ ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಮಾಲತಿ ಡ್ಯಾಂ ನಿರ್ಮಾಣವನ್ನು ಕೈಬಿಡಲಾಗಿದೆ.

ಆ) ಹಾಲಿ ಪ್ರಗತಿಯಲ್ಲಿರುವ ತುಂಗಾ ಮೇಲ್ದಂಡೆ ಯೋಜನೆ ಕಾಲುವೆಗೆ ಮಾಲತಿ ಅಣೆಕಟ್ಟು ನಿರ್ಮಾಣ ಮಾಡಿ ಇದರಿಂದ ನೀರೋದಗಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ತುಂಗಾ ಮೇಲ್ದಂಡೆ ಯೋಜನೆ ಮುಖ್ಯ ನಾಲೆ ಸರವಳಿ : 244.00 ಕಿ. ಮೀ. ವರೆಗೆ ಪಂಕ್ತೀಕರಣ ಅನುಮೋದನೆಯಾಗಿದ್ದು, 174.00ಕಿ.ಮಿ. ವರೆಗಿನ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಮುಖ್ಯ ನಾಲೆಯ 244.00 ಕಿ. ಮೀ. ನಿಂದ ಮುಂದಿನ ನಾಲಾ ಪಂಕ್ತೀಕರಣ ಪ್ರಸ್ತಾವನೆ ಪರಿಶೀಲನೆಯ ಹಂತದಲ್ಲಿದೆ. ಮೂಲ ಯೋಜನೆಯಲ್ಲಿ ಕೊನೆಯ ಹಂತದಲ್ಲಿ ಬರುವ ಹಾನಗಲ್ ತಾಲ್ಲೂಕಿನಡಿ 1386 ಹೆಕ್ಟೇರ್ ಯೋಜಿತ ಅಚ್ಚುಕಟ್ಟಿಗೆ ನೀರೋದಗಿಸುವ ಉದ್ದೇಶವಿದೆ. ಈ ಪ್ರದೇಶಕ್ಕೆ ಕೊನೆಯಂಚಿನಲ್ಲಿ ಬರುವ ನಾಲಾ ಜಾಲವನ್ನು ಇದರಡಿ ಬರುವ ಅಚ್ಚುಕಟ್ಟಿಗನುಗುಣವಾಗಿ ವಿನ್ಯಾಸಿಸಿ ಕಾಲುವೆಯನ್ನು ನಿರ್ಮಿಸಲಾಗುವುದು.

ಈ) ತುಂಗಾ ಮೇಲ್ದಂಡೆ ಯೋಜನೆಯನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಸರ್ಕಾರದ ಉದ್ದೇಶವಿದ್ದು, ಕರ್ನಾಟಕ ನೀರಾವರಿ ನಿಗಮವು 2005–06 ರ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ 113.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಆರ್ಥಿಕ ಸಹಾಯವನ್ನು ಈ ಯೋಜನೆಗೆ ಪಡೆಯಲು ಅನುಕೂಲವಾಗುವಂತೆ, ಈ ಯೋಜನೆಗೆ ಅವಶ್ಯವಿರುವ ಕೇಂದ್ರ ಜಲ ಆಯೋಗದ ಕ್ಲಿಯರೆನ್ಸ್‌ಗಳು, ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯಗಳಿಂದ ಕ್ಲಿಯರೆನ್ಸ್‌ಗಳಂತೆ ಸಂಪೂರ್ಣ ಪಾಲನೆಗಳ ನಂತರದಲ್ಲಿ ಕೇಂದ್ರ ಯೋಜನಾ ಆಯೋಗದ ಅಂಗೀಕಾರ ಪಡೆಯುವುದಕ್ಕೆ ಕ್ರಮ ಕೈಗೊಳ್ಳಲಾಗುವುದು.

5747, (6593) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) :– ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹಾನಗಲ್ ತಾಲ್ಲೂಕಿನ ಶೇಷಗಿರಿ ಗ್ರಾಮದ ಬಳಿಯಲ್ಲಿ ವರದಾ ನದಿಗೆ ಅಡ್ಡಲಾಗಿ